೧. ನಂಜನಗೂಡು ತಾಲ್ಲೂಕಿನ ವಿಶ್ವ ಬ್ಯಾಂಕ್ ನೆರವಿನ ಕುದ್ರಿಗುಂಡಿ ಹಳ್ಳ ಕೆರೆ ನೀರಾವರಿ ಯೋಜನೆಯ ೨೫೪ ಲಕ್ಷ ರೂಪಾಯಿಗಳ ಯೋಜನಾ ವರದಿಗೆ ಜುಲೈ ೧೯೮೩ರಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಈ ಯೋಜನೆಯಿಂದ ೮೧೬ ಹೆಕ್ಟೇರುಗಳ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಲಿದೆ. ಈ ಯೋಜನೆಯ ಅಣೆಕಟ್ಟು ಕಾಮಗಾರಿಗಳನ್ನು ಗುತ್ತಿಗೆದಾರರಾದ ಮೆಸರ್ಸ ಕನ್ಸಾಲಿಡೇಟೆಡ್ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್ ಇವರಿಗೆ ಎಲ್.ಸಿ.ಬಿ. ಮಾದರಿಯ ಆಧಾರದ ಮೇಲೆ ೧೯೮೩-೮೪ರಲ್ಲಿ ವಹಿಸಲಾಗಿದೆ. ಮಾರ್ಚ ೧೯೯೦ರವರೆಗೆ ಈ ಯೋಜನೆಗೆ ಒಟ್ಟು ೪೨೮ ಲಕ್ಷ ರೂಪಾಯಿಗಳು ವೆಚ್ಚವಾಗಿದೆ. ಅಣೆಕಟ್ಟಿನ ಕಾಮಗಾರಿಗಳು ಮುಗಿದಿದ್ದು ಕಾಲುವೆ ಕೆಲಸಗಳು ನಿರ್ಮಾಣದಲ್ಲಿದೆ.

೨. ಈ ಯೋಜನೆಯಿಂದ ಮುಳುಗಡೆಯಾಗುವ ಜನರಲ್ಲಿ ಶೇಖಡ ೭೫ರಷ್ಟು ಜನರಿಗೆ ಈಗಾಗಲೇ ಪರಿಹಾರಧನ ನೀಡಲಾಗಿದೆ. ಪರಿಹಾರಧನವನ್ನು ನೀಡುವಲ್ಲಿ ಆದ ವಿಳಂಬಕ್ಕೆ ಮುಖ್ಯ ಕಾರಣವೇನೆಂದರೆ ಅವರುಗಳಿಗೆ ಸಾಗುವಳಿಗಾಗಿ ನಿಗದಿಪಡಿಸಲಾದ ಸರ್ವೆ ನಂಬರ್‌ಗಳಿಗೆ ಬದಲಾಗಿ ಅವರು ಗಳು ಬೇರೆಯೇ ಸರ್ವೆ ನಂಬರ್‌ಗಳಲ್ಲಿ ಸಾಗುವಳಿ ಮಾಡುತ್ತಿದ್ದರು. ಇದನ್ನು ಸರಿಪಡಿಸುವ ಸಲುವಾಗಿ ತಹಶೀಲ್ದಾರರ ಗಮನಕ್ಕೆ ಈ ವಿಷಯವನ್ನು ತರಲಾಗಿದೆ.

೩. ಕಾಮಗಾರಿಗಳನ್ನು ಬಹಳ ಎಚ್ಚರಿಕೆಯ ಮೇಲುಸ್ತುವಾರಿ ಮತ್ತು ಗುಣ ನಿಯಂತ್ರಕ್ಕೆ ಒಳಪಟ್ಟು ಮಾಡಲ್ಪಟ್ಟು ಮೇಲಧಿಕಾರಿಗಳಿಂದ ಆಗಿಂದಾಗ್ಗೆ ಸ್ಥಳ ಪರೀಕ್ಷೆ ಮಾಡಲ್ಪಟ್ಟಿವೆ. ತೃಪ್ತಿ ಕರವಲ್ಲದ ಕಾಮಗಾರಿಗಳು ಕಂಡು ಬಂದ ತಕ್ಷಣವೇ ಅವುಗಳನ್ನು ಸರಿಪಡಿಸುವಲ್ಲಿ ಸೂಕ್ತಕ್ರಮವನ್ನು ಆಗಾಗ್ಗೆ ತೆಗೆದಂಕೊಳ್ಳಲಾಗಿದೆ. ಈ ಸಂಬಂಧದಲ್ಲಿ ನಿರ್ದಿಷ್ಟ ಹಾಗೂ ನಿಖರವಾದ ದೂರುಗಳು ಬಂದಲ್ಲಿ ಸೂಕ ವಾದ ತನಿಖೆ ನಡೆಸಲಾಗುವುದು.

(iii) ಜಿಲ್ಲಾ ಪರಿಷತ್ತುಗಳು ಪ್ರಾರಂಭಿಸಿದ ಪ್ರೌಢ ಶಾಲೆಗಳಿಗೆ ಸರ್ಕಾರದ ಮಂಜೂರಾತಿ

ಶ್ರೀ ಎ. ಬಸವರಾಜ್.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತುಗಳು ಪ್ರಾರಂಭಿಸಿದ ಹೈಸ್ಕೂಲುಂ ಗಳಿಗೆ ಸರ್ಕಾರ ಇನ್ನೂ ಮಂಜೂರಾತಿ ನೀಡಿಲ್ಲ. ಯಾವುದೋ ಪ್ರೌಢ ಶಾಲೆಯಿಂದ ಪ್ರತಿನಿಯುಕ್ತಿ ಹೊಂದಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಬಿಟ್ಟರೆ ಬೇರೆ ಶಿಕ್ಷಕರ ಮಂಜೂರಾತಿ ಯಾಗಿಲ್ಲ, ಅರೆಕಾಲಿಕ ಅಧ್ಯಾಪಕರ ನೆರವಿನಿಂದ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಮುಂದಿನ ವರ್ಷಾರ್ಥಿಂಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿದೆ. ಮಂಜೂರಾತಿ ನೀಡದಿದ್ದಲ್ಲಿ ಮಾನ್ಯತೆ ದೊರಕದೆ ಸಹಸ್ರಾರು ವಿದ್ಯಾರ್ಥಿಗಳ ಪರಿಸ್ಥಿತಿ ಡೋಲಾಯಮಾನವಾಗುತ್ತದೆ. ಆದ್ದರಿಂದ ಈ ವಿಚಾರವನ್ನು ತಕ್ಷಣ ಪರಿಶೀಲಿಸಿ ಶೀಘ್ರ ಮಂಜೂರಾತಿ ನೀಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

ಜಿಲ್ಲಾ ಪರಿಷತ್ತುಗಳು ಪ್ರೌಢ ಶಾಲೆಗಳನ್ನು ತೆರೆಯುವ ಬಗ್ಗೆ ಸರ್ಕಾರದಿಂದ ದಿನಾಂಕ ೧೨-೯-೧೯೯೯ ರಂದು ಮಾರ್ಗದರ್ಶನಗಳನ್ನು ನೀಡಿದೆ. ಮತ್ತು ಸರ್ಕಾರಿ ಸುತ್ತೋಲೆ ದಿನಾಂಕ ೨೫-೫-೯೦ರಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಹೇಗೆ ಕಳುಹಿಸಬೇಕೆಂದು ತಿಳಿಸಲಾಗಿದೆ; ಈ ಮಾರ್ಗದರ್ಶನಗಳನ್ನು ಹಾಗೂ ಸುತ್ತೋಲೆ ಪ್ರಕಾರ ಇಲ್ಲದ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಲು ಜಿಲ್ಲಾ ಪರಿಷತ್ತುಗಳಿಗೆ ಹಿಂದಕ್ಕೆ ಕಳುಹಿಸಲಾಗಿದೆ.

ಹೊಸ ಸರ್ಕಾರಿ ಹಾಗೂ ಖಾಸಗೀ ಪ್ರೌಢ ಶಾಲೆಗಳನ್ನು ಜಿಲ್ಲಾ ಪರಿಷತ್ತುಗಳು ತೆರೆಯುವ ಬಗ್ಗೆ ಸಧ್ಯದಲ್ಲೇ ಒಂದು ಸಭೆಯನ್ನು ಕರೆದು ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು, ೨೮-೨-೯೯ಕ್ಕೆ ಎಲ್ಲಾ ಅಧ್ಯಕ್ಷರುಗಳ ಸಭೆ ಕರೆದಿದ್ದೇನೆ. ತದನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ.

iv ಖಾನಾಪುರ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ ದರೋಡೆಕೋರರ ಹಾವಳಿ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಬಾಗೇವಾಡಿ, ಬಡಸಾ, ಖಾನಾಪೂರ ತಾಲ್ಲೂಕಿನ ಪಾರಿಶ್ವಾಡ ಚಿಕ್ಕಹಟ್ಟಿ ಹೂಳಿ ಮತ್ತು ಬೈಲಹೊಂಗಲ ತಾಲ್ಲೂಕಿನ ಗಿರಿಯಾಳ ಗ್ರಾಮಗಳಲ್ಲಿ ದರೋಡೆ ಗ್ಯಾಂಗುಗಳ ಹಾವಳಿ ಹೆಚ್ಚಾಗಿದೆ.

ರಾತ್ರಿ ಹೊತ್ತು ಮನೆಗಳ ಮೇಲೆ ಕಲ್ಲು ತೂರಿ ಅಂಜಿಸಿ ಅಲ್ಲಲ್ಲಿ ಕಳವು ಮಾಡಿದ್ದಾರೆ. ಗ್ರಾಮಗಳ ಜನರು ಗಸ್ತು ತಿರುಗುತ್ತಿದ್ದಾರೆ. ಆದರೂ ಕಲ್ಲು ಹೊಡೆಯುವುದು ನಿಂತಿಲ್ಲ. ಕಳವಿನ ಘಟನಾವಳಿಗಳು ಪ್ರತಿನಿತ್ಯ ಹೆಚ್ಚುತ್ತಲಿವೆ. ಪೋಲೀಸ್ ಇಲಾಖೆಯವರು ಒಬ್ಬೊಬ್ಬ ಪೋಲೀಸರನ್ನು ಕಳುಹಿಸುತ್ತಿದ್ದಾರೆಯೆ ಹೊರತು ಈ ಗ್ಯಾಂಗ್‌ಗಳನ್ನು ಶೋಧ ಮಾಡಿ ಹಿಡಿಯುವ ಪ್ರಯತ್ನ ಮಾಡುತ್ತಿಲ್ಲ. ಕೂಡಲೇ ಸರ್ಕಾರ ಈ ಗ್ಯಾಂಗುಗಳನ್ನು ಪತ್ತೆ ಹತ್ತ ಹಚ್ಚಿ ಕಳವಿನ ಹಾವಳಿ ತಡೆಯಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಬಾಗೇವಾಡಿ, ಬಾಡ, ಖಾನಾಪುರ, ಪರಿಸ್ವಾಡ್, ಚಿಕ್ಕಹಟ್ಟಿಹೊಳೆ ಮತ್ತು ಗಿರಿಯಾಳ ಗ್ರಾಮಗಳಲ್ಲಿ ಇತ್ತೀಚೆಗೆ ಡಕಾಯಿತಿ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದಾಗ್ಯೂ ಮನೆ ದರೋಡೆ ಪ್ರಕರಣಗಳು ಹೆಚ್ಚಾಗಿದ್ದು, ಹಿಂದಿನ ಎರಡು ತಿಂಗಳಿಂದ ವರದಿಯಾದಂತಹ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.—

೧.	ಖಾನಾಪುರ	—	೮
೨.	ಪರಿಸ್ವಾಡ್	—	೩
೩.	ಚಿಕ್ಕಹಟ್ಟಿಹೊಳೆ	—	ಇಲ್ಲ
೪.	ಬಾಗೇವಾಡಿ	—	೧
೫.	ಬಾಡ	—	ಇಲ್ಲ
೬.	ಗಿರಿಯಾಳ	—	ಇಲ್ಲ
೭.	ದೊಡ್ಡ ಹೊಸೂರು	—	೨

ಈ ಮೇಲಿನ ಎಲ್ಲ ಪ್ರಕರಣಗಳು ಪಾರಿವಾಡದ ಮೂಲಕ ಬಾಗೇವಾಡಿ ಖಾನಾಪುರ ರಸ್ತೆಯ ನಡುವಣ ವರದಿಯಾದಂತಹ ಪ್ರಕರಣಗಳಾಗಿವೆ. ಜೀಗಗಳನ್ನು ಒಡೆದು, ಗೋಡೆ ಕೊರೆದ ಹಾಗೂ ಹೆಂಚುಗಳನ್ನು ತೆಗೆದಂತಹ ಮುಖ್ಯವಾದ ಪ್ರಕರಣವಾಗಿದೆ. ಚಲಿಸುತ್ತಿರುವಂತಹ ಗುಂಪು (ನೊಮಾಡಿಕ್) ಈ ಅಪರಾಧಗಳನ್ನು ಎಸಗಿರುವುದೆಂದು ಸಂಶಯಪಡಲಾಗಿದೆ. ಈ ಅಪರಾಧಗಳನ್ನು ಪತ್ತೆ ಹಚ್ಚಲು ಬಯಲಹೊಂಗಲದ ಸಿ.ಪಿ.ಐ ರವರ ನೇತೃತ್ವದಲ್ಲಿ ಅಪರಾಧ ತನಿಖಾ ದಳದ ಸೇವೆಯನ್ನು ನೇಮಕ ಮಾಡಲಾಗಿದೆ. ಮೇಲಿನ ಗ್ರಾಮಗಳ ಮೂಲಕ ಬಾಗೇವಾಡಿ ಹಾಗೂ ಖಾನಾಪುರ ನಡುವಣ ತೀವ್ರತರವಾದ ರಾತ್ರಿ ಗಸ್ತನ್ನು ಏರ್ಪಡಿಸಲಾಗಿದೆ. ಈ ಎಲ್ಲ ಹಳ್ಳಿಗಳ ಗ್ರಾಮೀಣಾಭಿವೃದ್ಧಿ ಅಧ್ಯಕ್ಷರನ್ನು ಚುರುಕುಗೊಳಿಸಲಾಗಿದ್ದು, ಹಿಂದಿನ ೧೫ ದಿನಗಳಿಂದ ಹಳ್ಳಿಯ ಜನರು ಸಹ ಗುಂಪು ಗೂಡಿ ರಾತ್ರಿ ಗಸ್ತನ್ನು ಮಾಡಲು ಭಾಗವಹಿಸುತ್ತಿದ್ದಾರೆ. ಹಿರಿಯ ಪೋಲೀಸ್ ಅಧಿಕಾರಿಗಳು ಮೇಲಿನ ಗ್ರಾಮಗಳಿಗೆ ಭೇಟಿ ನೀಡಿ ಸದರಿ ಪ್ರಕರಣಗಳ ಪತ್ತೆ ಹಚ್ಚುವ ಕಾರ್ಯದಲ್ಲಿ ಪ್ರಗತಿ ಸಾಧಿಸುವ ಮುನ್ನಡೆಯಲ್ಲಿ ನಿಶ್ಚಳ ಪ್ರಯತ್ನವನ್ನು ನಡೆಸುತ್ತಿರುವುದು ಕಂಡುಬಂದಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ.— ಮಾನ್ಯ ಅಧ್ಯಕ್ಷರೇ. ಮೈಥಿಲಿ ವಿಶ್ವವಿದ್ಯಾಲಯದಲ್ಲಿ ಬಿ.ಎಡ್. ಪದವಿ ಪಡೆದ ಆಧಾರದ ಮೇಲೆ ೧೯೬೭ರಲ್ಲಿ ಮುಂಬಡ್ತಿ ಪಡೆದು ಕೆ. ವಿಜಯವಿಠಲ್‌ರವರು ಸರಕಾರಿ ಪ್ರೌಢಶಾಲೆ ಮೋಂಟಪದವು ೨ ರಾಧಾಕೃಷ್ಣಭಟ್ ಸರಕಾರಿ ಜೂನಿಯರ್ ಕಾಲೇಜು ಹಳೆಯಂಗಡಿ ೩ ಗಣಪತಿಭಟ್ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕನ್ಯಾಸದಲ್ಲಿ ಸೇವೆ ಮಾಡುತಿದ್ದವರು ಇತ್ತೀಚೆಗೆ ಮೈಥಿಲಿ ವಿಶ್ವವಿದ್ಯಾಲಯಕ್ಕೆ ಪದವಿಯನ್ನು ಸಿಗಲಿಲ್ಲ ಎಂಬ ನೆಲೆಯಲ್ಲಿ ಹಿಂಬಡ್ತಿಗೊಳಿಸಿ ಆದೇಶ ನಿಡಲಾಗಿದೆ ಇದರಿಂದ ಸದ್ರಿ ಅಧ್ಯಾಪಕರಿಗೆ ತುಂಬಾ ಅನ್ಯಾಯವಾಗಿದೆ. ಆದರೆ ಸರಕಾರವು ಆದೇಶ ಸಂ. ಇಡಿ ೧೩೯ ಎಸ್.ಇ ಎಸ್, ೮೮ ದಿನಾಂಕ ೧೬-೬-೧೯೬೮ರಲ್ಲಿ ತರಬೇತಿ ರಹಿತ ವೇತನ ಶ್ರೇಣಿಯಲ್ಲಿ ೧೫ ವರ್ಷ ಸೇವೆಯನ್ನು ಸಲ್ಲಿಸಿದ ಪ್ರೌಢಶಾಲಾ ಸಹ ಶಿಕ್ಷಕರನ್ನು ತರಬೇತಿ ಪಡೆದ ಸಹ ಶಿಕ್ಷಕರಿಗೆ ಸಮಾನವಾಗಿ ಪರಿಗಣಿಸಬೇಕೆಂದು ಸರಕಾರವು ಆದೇಶ ನೀಡಿದೆ ಇದರ ಆಧಾರದ ಮೇಲೆ ಮೇಲೆ ತಿಳಿಸಿದ ಸಹ ಶಿಕ್ಷಕರು ಹದಿನೈದು ವರ್ಷ ಸೇವೆ ಸಲ್ಲಿಸಿರುವುದರ ಆಧಾರದ ಮೇಲೆ ಮುಂಬಡ್ತಿ ಕೊಳಿಸುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು 'ಮೈಥಿಲಿ ವಿಶ್ವವಿದ್ಯಾಲಯ' ಎಂಬ ಬೀನಾಮಿ ವಿಶ್ವವಿದ್ಯಾನಿಲಯದ ಬಿ. ಎಡ್. ಡಿಗ್ರಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡಿದ ದೂರಿನ ಬಗ್ಗೆ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಬೆಂಗಳೂರು ಅವರು ಕೂಲಂಕಷ ವಿಚಾರಣೆ ನಡೆಸಿರುತ್ತಾರೆ.

ವಿಚಾರಣೆಯಲ್ಲಿ ಕಂಡು ಬಂದಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂರು ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರು (ಈ ಕೆಳಗೆ ಸೂಚಿಸಿದಂತೆ) ಮೈಥಿಲಿ ವಿಶ್ವವಿದ್ಯಾಲಯದ ಬಿ.ಎಡ್. ಡಿಗ್ರಿ ಪಡೆದಿರುವುದಾಗಿ ಪ್ರಮಾಣ ಪತ್ರ ಒಪ್ಪಿಸಿ ಬಡ್ತಿ ಪಡೆದಿರುತ್ತಾರೆ.

೧. ಶ್ರೀ ಗಣಪತಿ ಭಟ್ಟ

೨. ಶ್ರೀ ವಿಜಯ ವಿಠಲ,

೩. ಶ್ರೀ ಎಂ. ರಾಧಾಕೃಷ್ಣ ಭಟ್.

ಈ ಮೂರು ಮಂದಿ ಶಿಕ್ಷಕರನ್ನೂ ಹಿಂಬಡ್ತಿ ನೀಡಿ ಸಹನಿರ್ದೇಶಕರು ಆದೇಶ ಜಾರಿ ಮಾಡಿರುತ್ತಾರೆ. ಅಲ್ಲದೆ ಅವರಿಗೆ ಹೆಚ್ಚುವರಿಯಾಗಿ ಪಾವತಿಯಾದ ವೇತನವನ್ನು ಕಟಾವು ಮಾಡಲು ಆದೇಶಿಸಿರುತ್ತಾರೆ. ಆದರೆ ಈ ಶಿಕ್ಷಕರು ಹಿಂಬಡ್ತಿ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಹೂಡಿದ್ದು, ನ್ಯಾಯ ಮಂಡಳಿಯು ಹಿಂಬಡ್ತಿ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತಾರೆ. ಮೇಲ್ಕಂಡ ಸಹಶಿಕ್ಷಕರುಗಳಿಗೆ ಮುಂಬಡ್ತಿಗೊಳಿಸುವ ಬಗ್ಗೆ ಇರುವ ಅರ್ಜಿಯ ಮೇಲೆ ತೀರ್ಪು ಬಂದ ನಂತರ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅವಕಾಶ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಸಕಲ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕಾಗಿ ರೂಪಿಸಲ್ಪಟ್ಟ, ರಚಿಸಲ್ಪಟ್ಟ, ವಿನ್ಯಾಸಲಾಗಿರಿಸಲ್ಪಟ್ಟ ರಂಗಮಂದಿರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ರಾಜ್ಯದ ಎಲ್ಲೆಡೆಯ ಸಾಂಸ್ಕೃತಿಕ ತಂಡಗಳಿಗೂ ಇಲ್ಲಿ ಪ್ರದರ್ಶನಕ್ಕೆ ಸಾಕಷ್ಟು ಅವಕಾಶ ಬೇಕು. ಆದರೆ, ಕಲಾಕ್ಷೇತ್ರ ಖಾಲಿ ಇದ್ದಾಗಲೂ ಸಹಾ ಯಕ್ಷಗಾನ ಪ್ರದರ್ಶನಕ್ಕೆ ಇತ್ತೀಚೆಗೆ ಅವಕಾಶ ನೀಡುವುದಿಲ್ಲವೆಂದು ತಿಳಿದು ಬಂದಿದೆ. ಕನ್ನಡ ನಾಡಿನ ಸುಂದರ ಸುರಮ್ಯ ಜಾನಪದ ಪ್ರಾಕಾರವಾದ ಯಕ್ಷಗಾನವನ್ನು ಅವಕಾಶ ಇದ್ದಾಗ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಲು ಅನುವು ಮಾಡಿಕೊಡ ಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗಿರುವ ನಿಯಮಾವಳಿಗಳ ಪ್ರಕಾರ ರವೀಂದ್ರ ಕಲಾಕ್ಷೇತ್ರದಲ್ಲಿ ಕಲಾತಂಡಗಳಿಗೆ ಬೆಳಿಗ್ಗೆ ೬ ಘಂಟೆಯಿಂದ ಮಧ್ಯಾಹ್ನ ೨ ಘಂಟೆಯವರೆಗೆ ಮತ್ತು ಮಧ್ಯಾಹ್ನ ೨ ಘಂಟೆಯಿಂದ ರಾತ್ರಿ ೧೦ ಘಂಟೆಯವರೆಗೆ ಎರಡು ಪಾಳಿಗಳಲ್ಲಿ ಅವಕಾಶ ನೀಡಲಾಗುತ್ತಿದೆ. ಈ ಅವಧಿಯಲ್ಲಿ ರವೀಂದ್ರ ಕಲಾಕ್ಷೇತವು ಖಾಲಿ ಇದ್ದಲ್ಲಿ ಯಾವುದೇ ಕಲಾ ತಂಡಗಳಿಗೆ (ಯಕ್ಷಗಾನ ತಂಡಗಳಿಗೂ) ನಿಯಮಾವಳಿಗಳ ಪ್ರಕಾರ ಅವಕಾಶವಿದೆ.

ಸರ್ಕಾರದ ಆದೇಶದ ಪ್ರಕಾರ ರಾತ್ರಿ ೧೦ ಗಂಟೆಯ ನಂತರ ರವೀಂದ್ರ ಕಲಾಕ್ಷೇತ್ರವನ್ನು ಕಾಯ್ದಿರಿಸಲು ಅವಕಾಶವಿರುವುದಿಲ್ಲ. ಈ ನಿಬಂಧನೆಯಂತೆ, ಕಲಾಕ್ಷೇತ್ರದ ನಿರ್ವಹಣೆ ಹಾಗೂ ಸಿಬ್ಬಂದಿ ಅವಶ್ಯಕತೆ ಇರುವುದರಿಂದ ರಾತ್ರಿ ೧೦ ಗಂಟೆಯ ನಂತರ ನೀಡುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರದರ್ಶನಗಳಿಗೆ, ನಿಯಮಾವಳಿಗೊಳಪಟ್ಟು ಕಾಯ್ದಿರಿಸಲು ಅವಕಾಶವಿದೆ.

ವಿಧಾನಸೌಧ, ಹೈಕೋರ್ಟ್ ಮತ್ತು ಶಾಸಕರ ಭವನಕ್ಕೆ ಬರುವ ಸಾರ್ವಜನಿಕರಿಗೆ ಸುಲಭ ಶೌಚಾಲಯದ ವ್ಯವಸ್ಥೆ

ಶ್ರೀ ಪರಿಕಲ್ ಎಂ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಈ ಕೆಳಕಂಡ ವಿಚಾರದ ಬಗ್ಗೆ ಸೆಳೆಯಲು ಇಷ್ಟಪಡುತ್ತೇನೆ. ವಿಧಾನಸೌಧ, ಹೈಕೋರ್ಟು, ಶಾಸಕರ ಭವನ ಇವುಗಳಿಗೆ ಪ್ರತಿದಿನ ಸಾವಿರಾರು ಜನ ಪ್ರವಾಸಿಗರು ಹಾಗೂ ಸಾಮಾನ್ಯ ಸಾರ್ವಜನಿಕರು ಭೇಟಿ ನೀಡುತ್ತಾರೆ. ಆದರೆ ಈ ಮೂರು ಬೃಹತ್ ಕಟ್ಟಡಗಳ ಹೊರಭಾಗದಲ್ಲಿ